UASB Library
Newspaper Clippings
Saturday 14-01-2023 Pg .1
Jai Kisan

ಸಾವಯವ ಮೇಳದಲ್ಲಿ ಭಾಗವಹಿಸಲು ನೋಂದಣಿ

ಬೆಂಗಳೂರು: ಕರ್ನಾಟಕ ರಾಜ್ಯ ಕೃಷಿ ಇಲಾಖೆ ವತಿಯಿಂದ ಅರಮನೆ ಮೈದಾನದ ತ್ರಿಪುರವಾ ಸಿನಿಯಲ್ಲಿ ಜ. 20ರಿಂದ 22ರವರೆಗೆ ನಡೆಯಲಿರುವ ಅಂತಾರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳದಲ್ಲಿ ಭಾಗವಹಿಸಲು ಮಳಿಗೆಗಳು ನೋಂದಣಿ ಮಾಡಿಕೊಳ್ಳಬಹುದಾಗಿದೆ. ಮೇಳವು ರಾಷ್ಟ್ರೀಯ ಸಮ್ಮೇಳನ, ಗುಣ ಮಟ್ಟದ ವಸ್ತು ಪ್ರದರ್ಶನ, ಉತ್ಪಾದಕರ ಮಾರುಕಟ್ಟೆದಾರರ ಸಭೆಗಳು, ರೈತರ ಕಾರ್ಯಾಗಾರ, ಸಾವಯವ ಆಹಾರ ಮಳಿಗೆಗಳು, ಬಳಕೆದಾರರೊಂದಿಗೆ ಸಂಪರ್ಕ ಮುಂತಾದ ಕಾರ್ಯಕ್ರಮ ಒಳಗೊಂಡಿರುತ್ತದೆ. ಮೇಳದಲ್ಲಿ ಸಾವಯವ ಮತ್ತು ಸಿರಿಧಾನ್ಯಗಳಿಂದ ತಯಾರಿಸಿದ ವಿವಿಧ ಆಹಾರ ಖಾದ್ಯಗಳ ಮಳಿಗೆಗಳನ್ನು ಸ್ಥಾಪಿ ಸಲು ಉದ್ದೇಶಿಸಲಾಗಿದೆ. ಈ ಮೇಳದಲ್ಲಿ ಭಾಗವಹಿ ಸುವವರಿಗೆ ಸಾವಯವ, ಸಿರಿಧಾನ್ಯಗಳ ಉಪಹಾರ, ತಿಂಡಿ, ಕಾಫಿ/ಟೀ, ಇತ್ಯಾದಿ (ಸಸ್ಯಹಾರ ಮಾತ್ರ) ಮಾರಾಟ ಮಾಡಲು ಇಚ್ಚಿಸುವವರು ಮಳಿಗೆಗಳನ್ನು ಕಾಯ್ದಿರಿಸಲು 8277929852 ಸಂಪರ್ಕಿಸ ಬಹು ದು. ಜ.18ರೊಳಗೆ ನೋಂದಾಯಿಸಬಹುದು ಎಂ ದು ಕೃಷಿ ಇಲಾಖೆಯ ನಿರ್ದೇಶಕರು ತಿಳಿಸಿದ್ದಾರೆ.



14-01-2023
Viswavani Pg 02

14-01-2023
Uadayavani Pg 07

ಕೃಷಿಯನ್ನು ಉದ್ಯಮವನ್ನಾಗಿ ರೂಪಿಸಲು ಚಿಂತನೆ

ಹಾಸನ: ಕೃಷಿಯನ್ನು ಉದ್ಯಮವನ್ನಾಗಿ ರೂಪಿಸಲು ಸರ್ಕಾರ ಚಿಂತನೆ ನಡೆಸಿದೆ. ರೈತರು ಬಿತ್ತಿ ಬೆಳೆದು ಕೊಯ್ಲು ಮಾಡುವ ತನಕ ಮಾತ್ರ ಪ್ರೋತ್ಸಾಹ ನೀಡದೆ ರೈತರು ಬೆಳೆದ ಉತ್ಪನ್ನಗಳನ್ನು ಸಂಸ್ಕರಿಸಿ ಆಕರ್ಷಕವಾಗಿ ಪ್ಯಾಕ್ ಮಾಡಿ ಮಾರಾಟ ಮಾಡುವ ಮೂಲಕ ರೈತರ ಆದಾಯವನ್ನು ದ್ವಿಗುಣಗೊಳಿಸಲು ರಾಜ್ಯ ಸರ್ಕಾರ ಯೋಜಿಸಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ಹೇಳಿದರು.



ಬೇಲೂರು ತಾಲೂಕು, ಹಳೆಬೀಡು ಸಮೀಪದ ಪುಷ್ಪಗಿರಿ ಮಹಾಸಂಸ್ಥಾನ ಮಠದ ಆವರಣದಲ್ಲಿ ಪುಷ್ಪಗಿರಿ ಸಾವಯವ ಕೃಷಿ ಸಂಘ ದ ದಶಮಾನೋತ್ಸವ ಹಾಗೂ ರೈತ ಉತ್ಪಾದಕ ಸಂಸ್ಥೆ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ಕ್ಷೇತ್ರದ ಬಗ್ಗೆ ನಿರ್ಲಕ್ಷ್ಯ ಬೇಡ, ಕೃಷಿ ನಾಶ ವಾದರೆ ದೇಶಕ್ಕೆ ದುರ್ಭಿಕ್ಷ ಖಚಿತ. ಈ ನಿಟ್ಟಿನಲ್ಲಿ ಕೃಷಿಕರನ್ನು ಸದೃಢರನ್ನಾಗಿಸಿ ರೈತರ ಆದಾಯವನ್ನು ದ್ವಿಗುಣ ಗೊಳಿಸುವ ಉದ್ದೇಶದಿಂದ ಸರ್ಕಾರ ಅನೇಕ ಕಾರ್ಯಕ್ರಮ ಗಳನ್ನು ಜಾರಿಗೆ ತಂದಿದೆ ಎಂದರು.

ಜ. 31 ರಂದು ಹೊಸ ಯೋಜನೆ ಜಾರಿಗೆ ತರುತ್ತಿದ್ದು, ಮೀನುಗಾರರ ಬೋಟು, ಹಾಗೂ ರೈತರು ಉಳುಮೆಗೆ ಬಳಸುವ ಟ್ರ್ಯಾಕ್ಟರ್ ಗಳಿಗೆ ಬಳಸುವ ಇಂಧನಕ್ಕೆ ಸಬ್ಸಿಡಿ ನೀಡುವ ಮೂಲಕ ರೈತರಿಗೆ ಅನುಕೂಲ ಕಲ್ಪಿಸಲು ಸರ್ಕಾರ ಮುಂದಾಗಿದೆ. ಪ್ರತಿ ಎಕರೆಗೆ 250 ರೂ. ನಂತೆ ತಲಾ 5 ಎಕರೆ ಜಮೀನಿಗೆ ಅಗತ್ಯವಿರುವ 10 ಲೀಟರ್ ಡೀಸೆಲ್ ಸಬ್ಸಿಡಿ ನೀಡಲು ರೈತ ಶಕ್ತಿ ಯೋಜನೆಯಡಿ ನೇರ ವಾಗಿ ಹಣವನ್ನು ರೈತರ ಖಾತೆಗೆ ಜಮೆ ಮಾಡಲು ಸರ್ಕಾರ ನಿರ್ಧರಿಸಿದೆ ಎಂದು ಹೇಳಿದರು.